ಹೇಳಿ ನೋಡಿದರು. ರಾಷ್ಟ್ರಪತಿಗಳು ಬಂದು ಹೋದ ಮೇಲೆ ಮನೆ ಕಟ್ಟಿಕೊಳ್ಳಲು ಸ್ಕೀಮಿನಡಿ ಹಣ ಮಂಜೂರು ಮಾಡಿಸುವುದಾಗಿ ತಿಳಿಸಿದರು. ಆದರೂ ಶಾರದಮ್ಮ ತನ್ನ ಹಟವನ್ನು ಬಿಡದೆ ಪಟ್ಟು ಹಿಡಿದು ಕೂತಳು. ಎಲ್ಲವೂ ಅವರವರ ತುರ್ತಿನ ಆಮಿಷಗಳೆ ಅನಿಸತೊಡಗಿದವು. ಯಾಕೋ ಶಾರದಮ್ಮನನ್ನು ಒಪ್ಪಿಸುವುದು ಅವರೆಲ್ಲರಿಗೂ ಬಲು ಕಷ್ಟದ ಕೆಲಸ ಅನಿಸತೊಡಗಿತು. ಅಷ್ಟರಲ್ಲಿ ಶ್ರೀರಾಮರೆಡ್ಡಿ 'ಲೇ ಈಯಮ್ಮ ಒಪ್ಪಂಗಿಲ್ಲ. ಊರು ಬಿಟ್ಟು ಆ ಕಡಿಯಿಂದ ಸ್ಕೂಲಿಗೆ ಇನ್ನೊಂದಾರಿ ಐತಲ್ಲ... ಅದಕೆ ತಾರಾಕಿಸೋಣ. ಒಂದು ಮೈಲಿ ಜಾಸ್ತಿ ಆಗ್ಬೋದಷ್ಟೆ. ನಮ್ಮ ಎಮ್ಮೆಲ್ಲೆಗೆ ತಿಳಿಸಿದ್ರೆ ಎಲ್ಲಾ ನೋಡ್ಕತಾರೆ. ನಡೀರಿ ನಡೀರಿ' ಎಂದು ಹೊರಡಿಸಿದ. ಒಬ್ಬೊಬ್ಬರಾಗಿ ಎಲ್ಲರೂ ಹೊರಟುಬಿಟ್ಟರು.

ಮಾರನೆ ದಿನ ತಹಸೀಲ್ದಾರ್, ಬಿಇಒ ಮತ್ತು ಮೇಷ್ಟ್ರು ಮಹೇಶ ಊರಿನ ಒಂದಷ್ಟು ಜನರನ್ನು ಸ್ಕೂಲಿನಲ್ಲಿ ಸೇರಿಸಿ ಎಲ್ಲಾ ನಾಲಕ್ಕೂ ತರಗತಿಗಳಿಂದ ಸೇರಿಸಿ ಏಳು ವಿದ್ಯಾರ್ಥಿಗಳಷ್ಟೆ ಇರುವ ವಿಷಯವನ್ನು ತಿಳಿಸಿದರು. ಮತ್ತು ರಾಷ್ಟ್ರಪತಿಗಳು ಬಂದಾಗ ಬರೇ ಅಷ್ಟು ಜನ ಹುಡುಗರಿದ್ದರೆ ಸರಿಹೋಗುವುದಿಲ್ಲ. ಹಾಗಾಗಿ ಅಂದು ಖಾಸಗಿ ಶಾಲೆಗಳಿಗೆ ಹೋಗುತ್ತಿರುವ ಊರಿನ ಒಂದಷ್ಟು ಹುಡುಗರಿಗೆ ರಜಾ ಹಾಕಿಸಿ ಊರ ಶಾಲೆಗೆ ಬರುವಂತೆ ಮಾಡಬೇಕು ಎಂದು ವಿನಂತಿಸಿದರು. ಇಲ್ಲವೆಂದಲ್ಲಿ ಬರೇ ಏಳು ವಿದ್ಯಾರ್ಥಿಗಳಿರುವ ಶಾಲೆಗೆ ರಾಷ್ಟ್ರಪ್ರಶಸ್ತಿ ಹೇಗೆ ಸಿಕ್ಕಿತು ಎಂದು ಯಾವುದಾದರು ಮೀಡಿಯಾ ಪ್ರಶ್ನೆ ಎತ್ತಿ ಅದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾದರೆ ಇಡೀ ನಮ್ಮ ತಾಲ್ಲೂಕಿಗೆ ಕೆಟ್ಟ ಹೆಸರು ಬಂದ ಹಾಗಾಗುತ್ತೆ ಎಂದು ತಿಳಿಸಿದರು. ಅದು ಊರಿನವರಿಗೂ ಸರಿ ಎಂದು ಕಾಣತೊಡಗಿತು.

ಮೇಷ್ಟ್ರು ಮಹೇಶ ತನ್ನ ವೈಜ್ಞಾನಿಕ ಪ್ರಯೋಗಗಳಿಂದ ಒಂದಷ್ಟು ಪ್ರಸಿದ್ಧಿ ಹೊಂದಿದ್ದ. ಇರುವಷ್ಟೇ ಮಕ್ಕಳಿಗೆ ಆ ಪ್ರಯೋಗಗಳನ್ನು ಕಲಿಸಿ ರಾಜ್ಯಮಟ್ಟದ ವೈಜ್ಞಾನಿಕ ಪ್ರಯೋಗಗಳ ಸ್ಪರ್ಧೆಯಲ್ಲಿ ಎರಡನೇ ಬಹುಮಾನ ಪಡೆಯುವಂತೆ ಮಾಡಿದ್ದ. ಯಾವಾಗಲೂ ನಗರ ಪ್ರದೇಶದ ಮಕ್ಕಳೇ ಮೆಲುಗೈ ಸಾಧಿಸುತ್ತಿದ್ದ ಆ ಸ್ಪರ್ಧೆಯಲ್ಲಿ ಸಣ್ಣ ಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯ ಮಕ್ಕಳು ಬಹುಮಾನ ಗಳಿಸಿದ್ದು ದೊಡ್ಡ ಸುದ್ದಿಯಾಗಿ ಹೊಮ್ಮಿತ್ತು. ಜೊತೆಗೆ ಮಹೇಶ ತನ್ನ ಶಾಲೆಯ ಗೋಡೆಗಳಿಗೆಲ್ಲ ಜ್ಞಾನವನ್ನು ಬಿತ್ತರಿಸುವ ಚಿತ್ರಗಳನ್ನು ತಾನೆ ಸ್ವತಃ ಬಿಡಿಸಿ ಕಂಗೊಳಿಸುವಂತೆ ಮಾಡಿದ್ದ. ಇವೆಲ್ಲದರ ಜೊತೆಗೆ ಸ್ಥಳೀಯ ನಾಯಕರುಗಳ ಆಸಕ್ತಿಯ ಕಾರಣವಾಗಿ ಆ ಶಾಲೆಗೆ ರಾಷ್ಟ್ರಮಟ್ಟದಲ್ಲಿ ಅನಾಯಾಸವಾಗಿ ಪ್ರಶಸ್ತಿ ಒಲಿದುಬಂದಿತ್ತು. ಈಗ ಈ ವಿಷಯದಿಂದ ತಮ್ಮೂರಿಗೆ ಕೆಟ್ಟ ಹೆಸರು ಬರುವುದು ಊರಿನವರಿಗೂ ಇಷ್ಟವಿರಲಿಲ್ಲ. ಹಾಗಾಗಿ ರಾಷ್ಟ್ರಪತಿಗಳು ಬರುವ ದಿನ ಊರಿನ ಎಲ್ಲಾ ಮಕ್ಕಳೂ ತಮ್ಮತಮ್ಮ ಶಾಲೆಗಳಿಗೆ ರಜಾ ಹಾಕಿಕೊಂಡು ಊರ ಸರ್ಕಾರಿ ಶಾಲೆಗೆ ಬರಬೇಕೆಂದು ಅಂದು ಸಂಜೆಯೇ ಬೀದಿಗಳಲ್ಲಿ ಕೇಳಿ ಹೊಡೆಸಿದರು.

ರಾಷ್ಟ್ರಪತಿಗಳು ಬರುವ ದಿನ ಹತ್ತಿರವಾಗತೊಡಗಿತು. ಊರು ಹೊಸ ಬಣ್ಣ ಬಳಿದುಕೊಂಡು ಕಂಗೊಳಿಸುತ್ತಿತ್ತು. ಊರಿನೊಳಗಿಂದ ಹಾದುಹೋಗುವ ರಸ್ತೆಯನ್ನು ಬಿಟ್ಟು ಶಾಲೆಗೆ ಸಂಪರ್ಕ ಕಲ್ಪಿಸುವ ಮತ್ತೊಂದು ರಸ್ತೆಗೆ ಟಾರು ಹಾಕಿಸಲಾಗಿತ್ತು. ಹಾಗಾಗಿ ರಾಷ್ಟ್ರಪತಿಗಳ ಕಾರು ಊರಿನೊಳಗೆ ಬರುವ ಪ್ರಮೇಯವೇ ತಪ್ಪಿಹೋಗಿತ್ತು. ಒಂದು ವೇಳೆ ರಾಷ್ಟ್ರಪತಿಗಳು ಊರನ್ನು ನೋಡಬೇಕೆಂದು ಒಳಗೆ ಬರಲು ಇಚ್ಛಿಸಿದರೆ ಏನು ಗತಿ ಎಂಬ ಸಂದೇಹ ಜಿಲ್ಲಾಧಿಕಾರಿಗೆ ಬಂದಿತ್ತಾದ್ದರಿಂದ, ಊರ ಒಳಗಿನ ಎಲ್ಲ ರಸ್ತೆಗಳಿಗೂ ಒಂದೇ ದಿನದಲ್ಲಿ ಟಾರು ಹಾಕಿಸಲಾಯಿತು. ಇದಲ್ಲದೆ ದೇವಸ್ಥಾನ, ಹಾಲಿನ ಡೇರಿ, ಊರ ಮನೆಗಳು ಎಲ್ಲವೂ ವಿವಿಧ ಬಣ್ಣಗಳನ್ನು ಹೊತ್ತು ಹೊಳೆಯುತ್ತಿದ್ದವು. ಶಾರದಮ್ಮನ ಒಂದು ಮನೆಯನ್ನು ಬಿಟ್ಟು. ಅವಳು ತನ್ನ ಮನೆಯನ್ನು ಮುಟ್ಟದಂತೆ ಹಗಲು ರಾತ್ರಿ ಕಾವಲು ಕಾಯತೊಡಗಿದಳು. ಯಾರಾದರರೂ ಮನೆಯ ಹತ್ತಿರ ಬಂದರೆ ದೊಣ್ಣೆ ಹಿಡಿದು ಬಾರಿಸಲು ಹೋಗುತ್ತಿದ್ದಳು. ಊರ ಮುಖಂಡರಿಗೆ ಅದೊಂದು ತಲೆನೋವಾಗಿ ಪರಿಣಮಿಸಿತ್ತಾದರೂ ರಾಷ್ಟ್ರಪತಿಗಳು ಊರ ಒಳಗಿಂದ ಹಾದುಹೋಗುವುದಿಲ್ಲ ಎಂಬ ವಿಷಯ ಅವರನ್ನು ತುಸು ನಿರಾಳವಾಗಿ ಓಡಾಡುವಂತೆ ಮಾಡಿತ್ತು. ಮತ್ತೆ ಒಂದು ವೇಳೆ